# ಜೀರ್ಣೋದ್ಧಾರ -ನೆಲೆ, ಹಿನ್ನಲೆ

**ಬ. ಎ. ಶರ್ಮ, ರಜತಪೀಠಪುರಂ**

ಸೌಮ್ಯಾಕಾರಂ ಶಮಿತಸುಮನೋವೈರಿದಂಭಂ ಶರಣ್ಯಮ್
ನಿತ್ಯಾನಂದಂ ಮುದಿತಹೃದಯಂ ಪೀಠಕ್‌ಶೇಯವಾಸಮ್।
ದೇವೈಃ ಸರ್ವೈಃ ಅಮಿತವಿಭವೈಃ ಸೇವ್ಯಮಾನಂಸಲೀಲಮ್
ವಂದಾಮಸ್ತಂ ಶರವಣಭವಂ ಬಾಲರೂಪಂ ಕುಮಾರಮ್॥

'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ' ಎಂಬುದಾಗಿ ಶ್ರುತಿಯು ಧರ್ಮವನ್ನೇ ಜಗತ್ತಿನ ಸ್ಥಿತಿಗೆ ಸಾಧನವನ್ನಾಗಿ ಹೇಳುತ್ತದೆ. ಧರ್ಮಕರ್ಮದ ಆಚರಣೆಯಿಂದ ಮಾನವ ಆಧ್ಯಾತ್ಮಿಕ ಸುಖವನ್ನು ಪಡೆಯುವ ಪ್ರಯತ್ನ ಮಾಡಬಹುದು. ಜಪ-ತಪ-ಯಜ್ಞ ಇವೇ ಮೊದಲಾದವುಗಳು ಧರ್ಮಾಚರಣೆಗಳು ಎಂದು ನಮ್ಮಿಂದ ತಿಳಿಯಲ್ಪಟ್ಟಿವೆ. ಆಚಾರ್ಯ ಶಂಕರರು 'ಅಹಂಬ್ರಹ್ಮಾಸ್ಮಿ' ಎನ್ನುವ ರಾದ್ಧಾಂತ (ಸಮ್‌ಸಿದ್ಧಾಂತ ರಾದ್ಧಾಂತ)ದ ಮಂಡನೆಯ ಸಂದರ್ಭದಲ್ಲಿ ನಿರ್ಗುಣ (ಗುಣಾತೀತ) ಬ್ರಹ್ಮನ ಉಪಾಸನೆಗೆ ಪೂರಕವಾಗಿ ಸಗುಣ ಬ್ರಹ್ಮನ ಉಪಾಸನೆಯನ್ನು ತಿಳಿಸಿದ್ದಾರೆ. ಇದು ಕೇವಲ ಮನಸ್ಸಿನ ಏಕಾಗ್ರತೆಯನ್ನು ಸಾಧಿಸಲು ಅಥವಾ ಹೊಂದಲು ಇರುವ ಒಂದು ವಿಧಾನ. ಅಂತಹ ಸಂದರ್ಭದಲ್ಲಿ ದೇವರಿಗೆ ಹಲವು ಅವಯವ, ಆಯುಧಗಳನ್ನು ಕಲ್ಪನೆ ಮಾಡಿದ್ದು ಯುಕ್ತಿಪೂರ್ವಕವಾಗಿಯೇ ಹೊರತು ಸ್ವೇಚ್ಛೆಯಿಂದ ಕಲ್ಪಿಸಿದ್ದಲ್ಲ. ಈ ರೀತಿಯ ಸಗುಣ ಬ್ರಹ್ಮನ ಉಪಾಸನೆಯ ವಿಧಾನದಲ್ಲಿ ಈಗ ಪ್ರಧಾನವಾಗಿ ಕಂಡು ಬರುವಂತದ್ದೇ ದೇವಾಲಯ. ಹಿಂದೆ ಯಾವ ಉದ್ದೇಶದಿಂದ ದೇವಾಲಯದ ನಿರ್ಮಾಣ ಮಾಡಿ, ದೇವರನ್ನು ಪ್ರತಿಷ್ಠಾಪಿಸಿ ಶ್ರದ್ಧಾ ಭಕ್ತಿಯಿಂದ ಆರಾಧನೆಯನ್ನು ನಡೆಸಿಕೊಂಡು ಬರಲಾಗುತ್ತಿತ್ತೋ ಆ ಉದ್ದೇಶದಿಂದ ಸಮಾಜ ಇಂದು ವಿಮುಖವಾಗಿರುವಂತೆ ಕಂಡು ಬರುತ್ತಿದೆ. ರಾಜಕೀಯ, ಕಪಟ, ಹಗೆ, ಇತ್ಯಾದಿಗಳೇ ದೇವಾಲಯವನ್ನು ಆವರಿಸಿಕೊಂಡಿದೆಯೋ ಎಂದೆನಿಸುತ್ತಿದೆ. ಯಾವುದೇ ರೀತಿಯ ಸಂದೇಹಗಳಿದ್ದಲ್ಲಿ, ಅಂತಹ ಸಂದರ್ಭದಲ್ಲಿ ಶಾಸ್ತ್ರವೇ ಪ್ರಮಾಣವಾಗುತ್ತದೆಯೇ ಹೊರತು ಬೇರೆ ವಿಷಯಗಳಲ್ಲ. ಆದ್ದರಿಂದ ಭಗವದ್ಗೀತೆಯಲ್ಲಿ ಹೀಗೆ ಹೇಳಲಾಗಿದೆ -

*ಯಃ ಶಾಸ್ತ್ರವಿಧಿ ಮುತ್ಸೃಜ್ಯ ವರ್ತತೇ ಕಾಮಕಾರತಃ,*
*ನಸ ಸಿದ್ಧಿಮವಾಪ್ನೋತಿನ ಸುಖಂ ನ ಪರಾಂಗತಿಮ್ ॥*

ಯಾರು ಶಾಸ್ತ್ರ ವಿಧಿಯನ್ನು ತ್ಯಜಿಸಿ, ಸ್ವೇಚ್ಛಾನುಸಾರ ಭೋಗದಲ್ಲಿ ಮಗ್ನನಾಗಿರುವನೋ ಅವನಿಗೆ ಸಿದ್ಧಿಯೂ ಆಗದು ಸುಖವೂ ಸಿಕ್ಕದು, ಉತ್ತಮಗತಿಯೂ ಬಾರದು. ಶಾಸ್ತ್ರ ಒಂದು ಕೈ ಮರದಂತೆ, ದೇವರ ಕಡೆಗೆ ಹೋಗಬೇಕಾದರೆ ದಾರಿಯಾವುದು ಎಂಬುದನ್ನು ಹೇಳುವುದು. ಈ ಪ್ರಪಂಚದಲ್ಲಿ ಸುಖವಾಗಿರಬೇಕಾದರೆ ಅದಕ್ಕೂ ಒಂದು ದಾರಿ ಇದೆ. ಅದೇ ಅರ್ಥ ಮತ್ತು ಕಾಮಗಳನ್ನು ಧಾರ್ಮಿಕವಾಗಿ ಅನುಭವಿಸುವುದು ಕೊನೆಗೆ ಮೋಕ್ಷಕ್ಕೆ ಅಣಿಯಾಗುವುದು. ಯಾವ ಧರ್ಮವೂ ಸ್ವೇಚ್ಛಾಚಾರಿಯಾಗುವುದನ್ನು ಅನುಮೋದಿಸುವುದಿಲ್ಲ. ಯಾರು ಶಾಸ್ತ್ರವನ್ನು ಅಲ್ಲಗಳೆಯುವರೋ ಮತ್ತು ಅದಕ್ಕೆ ವಿರೋಧವಾಗಿ ನಡೆದುಕೊಳ್ಳುವರೋ ಅವರಿಗೆ ಸಿದ್ಧಿಯಾಗುವುದಿಲ್ಲ. ಅಂದರೆ ಜೀವನದಲ್ಲಿ ಒಂದು ಭವ್ಯ ಆದರ್ಶ ದೊರಕುವುದಿಲ್ಲ. ನಾನು ಗೋಡೆಗೆ ಚೆಂಡನ್ನು ಎಸೆದರೆ ಗೋಡೆ ನನಗೆ ಪ್ರತಿ ಎಸೆಯುವುದು. ಅದರಂತೆಯೇ ಕರ್ಮನಿಯಮ. ನಾನು ಇತರರಿಗೆ ಮಾಡಿದ್ದು ನನಗೇ ಬರುವುದು. ಆದ್ದರಿಂದ-

*ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ ।*
*ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥*

ಆದಕಾರಣ ಪ್ರತಿಯೊಬ್ಬನೂ ಕಾರ್ಯಾಕಾರ್ಯಗಳ ನಿರ್ಣಯ ಮಾಡುವಾಗ ಶಾಸ್ತ್ರವನ್ನು ಪ್ರಮಾಣವೆಂದು ಭಾವಿಸಬೇಕು. ಶಾಸ್ತ್ರ ವಿಧಿಯನ್ನರಿತರಷ್ಟೇ ಈ ಲೋಕದಲ್ಲಿ ಕರ್ಮವನ್ನು ಮಾಡಲು ಅರ್ಹರಾಗುವುದು. ಏನನ್ನು ಮಾಡಬೇಕು, ಏನನ್ನು ಬಿಡಬೇಕು ಎಂಬ ವಿಷಯದಲ್ಲಿ ನಮಗೆ ಶಾಸ್ತ್ರವೇ ಪ್ರಮಾಣ. ವರ್ಣಾಶ್ರಮ ಧರ್ಮಾನುಸಾರಿಯಾಗಿ ಬೇಕು, ಬೇಡಗಳನ್ನು (ವಿಧಿ-ನಿಷೇಧ) ಶಾಸ್ತ್ರದಲ್ಲಿ ತಿಳಿಸಲಾಗಿದೆ. ನಾವು ಎಲ್ಲವನ್ನೂ ನಿರ್ಧರಿಸುವ ಮಟ್ಟಕ್ಕೆ ಏರಿಲ್ಲ. ಕೇವಲ ತತ್ಕಾಲದಲ್ಲಿ ನಮಗೆ ಯಾವುದು ಪ್ರಿಯವಾಗುವುದೋ ಅದನ್ನು ಮಾಡಬಾರದು. ಅದು ಶಾಸ್ತ್ರಕ್ಕೆ ವಿರೋಧವಾಗಿದ್ದರೆ ಬಿಡಬೇಕು, ಹಾಗೆ ಮಾಡಿದಲ್ಲಿ ಮಾತ್ರ ಕ್ಷೇಮ. ಆದ್ದರಿಂದ ಶಾಸ್ತ್ರವಿಧಿಗನುಗುಣವಾಗಿ ದೇವೋಪಾಸನೆಯ ಉದ್ದೇಶದಿಂದ ದೇವಾಲಯ ನಿರ್ಮಾಣ, ಪ್ರತಿಷ್ಠಾದಿಗಳನ್ನು ನಡೆಸಿ ಆರಾಧಿಸಿಕೊಂಡು ಬರುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಪ್ರತಿಷ್ಠಾದಿ ವಿಚಾರಗಳಿಗೆ ಸಂಬಂಧಿಸಿದಂತೆ ಕಿಂಚಿತ್ ಮಾಹಿತಿಯನ್ನು ನೀಡಬೇಕೆಂಬ ಉದ್ದೇಶದಿಂದ ಈ ಲೇಖನವನ್ನು ಬರೆಯಲಾಗಿದೆ. ಮುಂದೆ, ಪ್ರತಿಯೊಬ್ಬರೂ ಈ ವಿಷಯಗಳಲ್ಲಿ 'ಗಂಭೀರ' (ಆಳ)ವಾದ ಅಧ್ಯಯನವನ್ನು ನಡೆಸಿ, ತಮ್ಮ ಜ್ಞಾನ ಸಂಪತ್ತನ್ನು ವೃದ್ಧಿಸಿಕೊಂಡು ಧರ್ಮವೆಂಬ ಚಂದ್ರಮಂಡಲಕ್ಕೆ ಉಂಟಾದ ಗ್ರಹಣಕ್ಕೆ ಮೋಕ್ಷವನ್ನು ಕಲ್ಪಿಸಲು ವಿದ್ವನ್ಮಣಿಗಳು ಕಾರ್ಯತತ್ಪರರಾಗಬೇಕಾದುದು ಅತ್ಯಂತ ಅವಶ್ಯವಾಗಿದೆ.

ಶ್ರೀಮತ್ ಷಡ್ಗುಣ ಸಂಭೃತಂ ವಪುರಧಿಷ್ಠಾಯಾನುಗೃಹ್ಣಾತಿಯಃ ಶ್ರದ್ಧಾಭಕ್ತಿ ಪವಿತ್ರಿತೋಪಹರಣೈಃ ಸ್ವಾರಂಭ ಭೂತಾತ್ಮಕೈಃ।

*ಸ್ವಾತ್ಮಾನಂದ ರಸಾನುಭೂರಪಿ ಸದಾ ಸಂತರ್ಪಿತೋ ಯಜ್ವನಃ ತಂದೇವಂ ನಿಗಮಾಗಮಾಧ್ಯಧಿಗತಂ ನಿತ್ಯಂ ಸಮಾರಾಧ್ನುಯಾಮ್॥ -*

ಜ್ಞಾನ, ಸಂತೋಷ, ನಿತ್ಯತ್ವ, ಸ್ವಾತಂತ್ರ್ಯ, ಅವಿಘ್ನ ವೈಭವಗಳಿಂದ ಪರಿಪೂರ್ಣವಾದ ಶರೀರವನ್ನು ಧರಿಸಿ, ತನ್ನಲ್ಲೇ ತಾನು ರಮಿಸುತ್ತಿರುವ ನಿಗಮಾಗಮ ಪ್ರತಿಪಾದ್ಯನಾದ ಪರಮಾತ್ಮನು ಶ್ರದ್ಧಾ ಭಕ್ತಿಗಳಿಂದ ಪವಿತ್ರವಾದ ಪಂಚಭೂತಾತ್ಮಕವಾದ ಸಾಧನಗಳ ಸಮರ್ಪಣೆಯಿಂದ ಸಂತುಷ್ಟನಾಗಿ ಸಾಧಕರನ್ನು ಅನುಗ್ರಹಿಸುತ್ತಾನೆ. ಅಂತಹ ಸರ್ವಶ್ರೇಷ್ಠನಾದ ಪರಮಾತ್ಮನನ್ನು ನಾವೆಲ್ಲಾ ನಿತ್ಯವೂ ಆರಾಧಿಸಬೇಕು. ಇದುವೇ ದೇವತಾರಾಧನೆಯ ತತ್ತ್ವ.

ತಂತ್ರಶಾಸ್ತ್ರವು ಅತ್ಯಂತ ಪ್ರಸಿದ್ಧವಾದ ಗ್ರಂಥವಾಗಿದ್ದು ಅದರಲ್ಲಿ ದೇವತಾ ಪ್ರತಿಷ್ಠೆ, ಉತ್ಸವ, ಪ್ರಾಯಶ್ಚಿತ್ತಾದಿ ಹಲವು ವಿಚಾರಗಳು ಅಡಕವಾಗಿವೆ. ಅಂತಹ ತಂತ್ರಶಾಸ್ತ್ರದಲ್ಲಿ ನಿರ್ದಿಷ್ಟರಾದ ದೇವತೆಗಳು ಹೀಗಿವೆ-

*ಶ್ರೀಶೇಶ ಸೇಶಹರಿ ಶುಂಭಜಿದಾಂಬಿಕೇಯ,*
*ವಿಘ್ನೇಶ ಭೂತಪತಿ ನಾಮ ವಿಭಿನ್ನ ಭೂಮ್ನಃ।*
*ವಕ್ಷ್ಯೇ ಪರಸ್ಯ ಪುರುಷಸ್ಯ ಸಮಾರೂಪ-*
*ಮರ್ಚಾವಿಧಿಂ ಸಹಮಥಕ್ ಚ ವಿಶೇಷಯುಕ್ತಮ್ ॥*
*ಬ್ರಹ್ಮಾರಕ ವೈಶ್ರವಣ ಕೃಷ್ಣ ಸರಸ್ವತೀ ಶ್ರೀ-*
*ಗೌರ್ಯಗ್ರಜಾದಿಶತು ಕಾಳ್ಯಪಿ ಮಾತರೋಮೇ।*
*ಕ್ಷೇತ್ರಾಧಿಪೋऽಥ ರುರು ಜಿದ್ಗಿರಿಶಾದಿ*
*ರೂಪಾಣೀಂದ್ರಾದಯೋऽಪಿ ನಮತೇऽಭಿಮತಂ ಪ್ರಸನ್ನಾಃ ॥*

ವಿಷ್ಣು, ಶಿವ ಶಂಕರನಾರಾಯಣ, ದುರ್ಗೆ, ಸುಬ್ರಹ್ಮಣ್ಯ, ಗಣಪತಿ, ಶಾಸ್ತ, ಬ್ರಹ್ಮ, ಸೂರ್ಯ, ಕುಬೇರ, ಕೃಷ್ಣ, ಸರಸ್ವತೀ, ಲಕ್ಷ್ಮಿ, ಪಾರ್ವತೀ, ಜೇಷ್ಠಾಲಕ್ಷ್ಮೀ, ಕಾಳೀ, ಸಪ್ತಮಾತೃಗಳು, ಕ್ಷೇತ್ರಪಾಲ, ಚಾಮುಂಡಿ, ವೀರಭದ್ರಾದಿ ದೇವತೆಗಳು, ಇಂದ್ರಾದಿ ದಶದೇವತೆಗಳು. ಇವಿಷ್ಟು ಪ್ರಧಾನ ದೇವತೆಗಳನ್ನು ಆರಾಧಿಸಬೇಕಾಗಿ ತಿಳಿಸಲಾಗಿದೆ. ದೇವಾಲಯ ಜೀರ್ಣವಾಗಿದ್ದಲ್ಲಿ ಸಂಸ್ಕರಿಸಬೇಕು. ನೂತನ ದೇವಾಲಯ ನಿರ್ಮಾಣಕ್ಕಿಂತಲೂ ಜೀರ್ಣವಾದ ದೇವಾಲಯವನ್ನು ಉದ್ಧರಿಸಿದಲ್ಲಿ ಅತಿಶಯವಾದ ಪುಣ್ಯಪ್ರಾಪ್ತವಾಗುತ್ತದೆ.

(ಮುಂದುವರಿಯುವುದು)

# ಶ್ರೀ ಸುಬ್ರಹ್ಮಣ್ಯ ಸಭೆ-ಶ್ರೀ ಕೃಷ್ಣಜನ್ಮಾಷ್ಟಮಿ ಆಚರಣೆ

**ವರದಿ : ಪ. ಸಂಜಯ್‌ಕುಮಾರ್‌ರಾವ್**

ಶ್ರೀ ಸುಬ್ರಹ್ಮಣ್ಯ ಸಭೆಯ ಶತಮಾನೋತ್ಸವ ಸಂಭ್ರಮದ ಬಳಿಕ ಸಮಾಜ ಬಾಂಧವರೆಲ್ಲಾ ಒಟ್ಟಾಗುವ ಸುಯೋಗ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆಯ ಸಂದರ್ಭದಲ್ಲಿ ಲಭಿಸಿತು. ಬೆಳಿಗ್ಗೆ 9-30ರಿಂದ 10-30ರ ತನಕ ಶ್ರೀ ಲಲಿತಾ ಸಹಸ್ರನಾಮ, ಶ್ರೀ ವಿಷ್ಣು ಸಹಸ್ರನಾಮ ಪಾರಾಯಣದೊಂದಿಗೆ ಕಾರ್ಯಕ್ರಮ ಪ್ರಾರಂಭಿಸಲ್ಪಟ್ಟಿತು.

10-30ರಿಂದ 5 ವರ್ಷಗಳ ಒಳಗಿನ ಚಿಣ್ಣರಿಗಾಗಿ ಹಾಗೂ 6ರಿಂದ 10 ವರ್ಷಗಳ ಎಳೆಯರಿಗಾಗಿ ಎರಡು ವಿಭಾಗಗಳಲ್ಲಿ ಶ್ರೀ ಕೃಷ್ಣ ವೇಷ ಸ್ಪರ್ಧೆ ನಡೆಯಿತು.

ಶ್ರೀಮದ್ಭಗವದ್ಗೀತೆಯ 4ನೇ ಅಧ್ಯಾಯದ ಪ್ರಾರಂಭದ 10 ಶ್ಲೋಕಗಳ ಕಂಠಪಾಠ ಸ್ಪರ್ಧೆ 5ರಿಂದ 10 ವರ್ಷ, 11ರಿಂದ 16 ವರ್ಷ, 16 ವರ್ಷಕ್ಕೆ ಮೇಲ್ಪಟ್ಟ ಮುಕ್ತವಿಭಾಗ, ಹೀಗೆ ಮೂರು ಸ್ತರಗಳಲ್ಲಿ ನಡೆಯಿತು.

ಶ್ರೀ ಕೃಷ್ಣನ ಬಗ್ಗೆ ತಿಳಿವನ್ನು ಮೂಡಿಸುವ ಸಲುವಾಗಿ 'ರಸಪ್ರಶ್ನೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಧ್ಯಾಹ್ನ ಭೋಜನದ ಬಳಿಕ ಮಡಕೆ ಒಡೆಯುವ ಸ್ಪರ್ಧೆ, ಕುತೂಹಲಕಾರಿಯಾಗಿಯೂ, ಮನರಂಜನೀಯವಾಗಿಯೂ ಮೂಡಿಬಂತು.

10ನೆಯ ತರಗತಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆದವರಿಗಾಗಿ ಶ್ರೀ ಸದಾಶಿವ ಶಾಸ್ತ್ರಿಯವರಿಂದ ಪ್ರತಿಭಾ ಪುರಸ್ಕಾರ ಜರಗಿತು. ಈ ಕಾರ್ಯಕ್ರಮದಲ್ಲಿ ಹಿರಿಯರಾದ ಎಲ್ಲೂರು ಶ್ರೀಧರರಾವ್ ಇವರು ಪ್ರತಿಭಾನ್ವಿತರಿಗೆ ಫಲಪುಷ್ಪ ಸ್ಮರಣಿಕೆಗಳನ್ನು ನೀಡಿದರು.

ಎಲ್ಲಾ ಸಮಾಜ ಬಾಂಧವರ ಪಾಲ್ಗೊಳ್ಳುವಿಕೆಯಲ್ಲಿ ಹೌಸಿಹೌಸಿ ಆಟ ಜರಗಿತು. ವಿವಿಧ ನೃತ್ಯಗಳ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮ ಬಹು ರಂಜನೀಯವಾಗಿ ಮೂಡಿಬಂತು.

**ಬಹುಮಾನಗಳ ವಿಜೇತರ ವಿವರ**

ಶ್ರೀಕೃಷ್ಣ ವೇಷ ಸ್ಪರ್ಧೆ : 5 ವರ್ಷಗಳ ಕೆಳಗಿನ ವಿಭಾಗ - 1) ಪ್ರಾರ್ಥನಾ ರಾವ್ 2) ಸೌರವ್ 3) ಶುಭಶ್ರೀ

6 ವರ್ಷರಿಂದ 10 ವರ್ಷಗಳ ವಿಭಾಗ- 1) ಪ್ರೇರಣಾ ರಾವ್ 2) ಸಿಂಧೂರಾವ್ 3) ವೈಷ್ಣವಿ

5 ರಿಂದ 10 ವರ್ಷಗಳ ವಿಭಾಗ- 1) ವಿಜಯಲಕ್ಷ್ಮಿ 2) ಸಿಂಧೂರಾವ್ 3) ಅನನ್ಯರಾವ್

11 ವರ್ಷರಿಂದ 16 ವರ್ಷಗಳ ವಿಭಾಗ- 1) ಸೌಂದರ್ಯಲಕ್ಷ್ಮೀ 2) ಚಂದ್ರಿಕಾ ಬಿ. 3) ಐಶ್ವರ್ಯಲಕ್ಷ್ಮೀ

16 ವರ್ಷ ಮೇಲ್ಪಟ್ಟು - 1) ಪ.ಸಂಜಯಕುಮಾರ್‌ರಾವ್ 2) ಉಷಾರಾವ್

ಮಡಕೆ ಒಡೆಯುವ ಸ್ಪರ್ಧೆ : ನಿಶಾಂತ್ ಮತ್ತು ರಜತ್

ಚೆಕ್ಕುಲಿಗಳ ಸಂಖ್ಯೆಯನ್ನು ಊಹಿಸುವ ಸ್ಪರ್ಧೆ-ನಿಶಾಂತ್

ಶ್ರೀಕೃಷ್ಣ ವೇಷ ಸ್ಪರ್ಧೆಯ ಬಹುಮಾನಗಳನ್ನು ಶ್ರೀ ಸದಾಶಿವ ಶಾಸ್ತ್ರಿ ಇವರು ಪ್ರಾಯೋಜಿಸಿದ್ದರು.

ಇತರ ಸ್ಪರ್ಧೆಗಳ ಬಹುಮಾನಗಳನ್ನು ಪ್ರಾಯೋಜಿಸಿದವರು : ಶ್ರೀ ಎಂ. ಆರ್. ವಾಸುದೇವ, ಶ್ರೀ ಸಂತೋಷ್‌ಕುಮಾರ್, ಶ್ರೀ ರಘುವೀರ್, ಶ್ರೀ ಜಯಚಂದ್ರ, ಶ್ರೀಮತಿ ಅರುಣ ಸೋಮಶೇಖರ್, ಶ್ರೀ ಶಶಿಕಾಂತ ರಾವ್, ಶ್ರೀ ಶಿವಾನಂದ ರಾವ್, ಶ್ರೀಮತಿ ಸುಮಂಗಲಾ ಪ್ರಭಾಕರ್, ಶ್ರೀ ಅನಿಲ್ ರಾವ್, ಶ್ರೀ ಸಂಜಯಕುಮಾರ್‌ರಾವ್, ಶ್ರೀ ಮನೀಷ್ ರಾವ್, ಶ್ರೀ ವಿನೋದ್ ರಾವ್.

ಶ್ರೀ ಕೃಷ್ಣ ವೇಷ ಸ್ಪರ್ಧೆಗೆ ಶ್ರೀಮತಿ ಕವಿತಾ ಪ್ರದೀಪ್, ಶ್ರೀಮತಿ ಅನುರಾಧಾ ಮತ್ತು ಭಗವದ್ಗೀತಾ ಸ್ಪರ್ಧೆಗೆ ಶ್ರೀ ಸದಾಶಿವ ಶಾಸ್ತ್ರಿ ಹಾಗೂ ಶ್ರೀ ರಘುರಾಮ ಶರ್ಮ ಇವರುಗಳು ತೀರ್ಪುಗಾರರಾಗಿ ಸಹಕರಿಸಿದರು.

ಶ್ರೀ ಕೃಷ್ಣನ ಬಗ್ಗೆ ರಸಪ್ರಶ್ನೆ ಮತ್ತು ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಪ. ಸಂಜಯಕುಮಾರ್‌ರಾವ್ ಜರಗಿಸಿದರು.

ಸುಮಾರು 350ಕ್ಕೂ ಮಿಕ್ಕಿದ ಸಮಾಜ ಬಾಂಧವರು ಕಾರ್ಯಕ್ರಮಗಳಲ್ಲಿ ಭಾಗೀದಾರರಾದದ್ದು ಆಯೋಜಕರಿಗೆಲ್ಲಾ ಸಮಾಧಾನ ನೀಡಿತು.

## ಶ್ರದ್ಧಾಂಜಲಿ ಸಭೆ

ತಾ.04-10-2008ರಂದು ಶ್ರೀಶಾರದಾ ಮಂಟಪದಲ್ಲಿ ನಮ್ಮ ಸಂಘದ ಕೋಶಾಧಿಕಾರಿಯಾಗಿದ್ದ ದಿ। ಡಾ। ಐ. ಕೆ. ಶಿವರಾಮ ರಾವ್ ಇವರ ಧರ್ಮಪತ್ನಿ ಶ್ರೀಮತಿ ಉಮಾದೇವಿ ಇವರ ವೈಕುಂಠ ಸಮಾರಾಧನೆಯ ಸಂದರ್ಭದಲ್ಲಿ ಸೇರಿದ್ದ ಸಮಾಜ ಬಾಂಧವರು ಮೃತರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಶ್ರೀಯುತ ಎಮ್. ಪಾಲಚಂದ್ರ ರಾವ್ ಮತ್ತು ಡಾ। ಎಚ್.ನಿರಂಜನಭಟ್ ಇವರು ಮೃತರ ಗುಣಗಾನ ಮಾಡಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿದರು. ಶ್ರೀಮತಿ ಉಮಾದೇವಿಯವರ ಪುತ್ರ ಐ. ಕೆ. ಜಯಚಂದ್ರ ರಾಯರು ಸಂಘದ ಆಡಳಿತ ಮಂಡಳಿಯ ಸದಸ್ಯರಾಗಿದ್ದಾರೆ.

**ವಧು-ವರರ ವೇದಿಕೆ**

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.**

ಸಮಾಜದ ವಿವಾಹ ಯೋಗ್ಯ ವಧು-ವರರ ನೋಂದಾವಣೆ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತ ಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**- ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ**

**ರಾಧಾಮಾಧವ ಸ್ಟೋರ್ಸ್** ಫೋನ್ : 2522638, 2523394

**ಜೀನಸು ವ್ಯಾಪಾರಿಗಳು,** ಚಿಟ್ಪಾಡಿ, ಉಡುಪಿ - 576 101.

**ಉತ್ತಮ ದರ್ಜೆಯ ಜೀನಸು ಸಾಮಗ್ರಿಗಳು ಯೋಗ್ಯ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ.**
**ಮದುವೆ, ಉಪನಯನ ಇತ್ಯಾದಿ ವಿಶೇಷ ಕಾರ್ಯಕ್ರಮಗಳಿಗೆ ಸಂಪರ್ಕಿಸಿರಿ :**

**ಕೃಷ್ಣಾ ಟ್ರೇಡಿಂಗ್ ಏಜನ್ಸೀಸ್, ಚಿಟ್ಪಾಡಿ, ಉಡುಪಿ** ಇದರ ಸೋದರ ಸಂಸ್ಥೆ.
ಪ್ರೊ : ಎಂ. ಸದಾನಂದರಾವ್ ಮತ್ತು ಎಂ. ಸಂತೋಷರಾವ್, ಚಿಟ್ಪಾಡಿ, ಉಡುಪಿ